ಸಂಬಳ ಎಲ್ಲವನ್ನೂ ಇವರೇ ಕೊಡುತ್ತಿದ್ದರು. ಮೀನು, ಮಾಂಸ ತರಿಸುವ ಹೊತ್ತಿನಲ್ಲಿ ಮುಕುಂದ, 'ಅಪ್ಪಾ ನನ್ನತ್ರ ಇದೆ' ಅಂದರೂ ಕೇಳದೆ, 'ಇರಲಿ ಇದನ್ನ ಇಟ್ಟುಕೊಂಡು ಹೋಗಿ ಬಾ' ಎಂದು ಅವನ ಜೇಬಿಗೆ ನೋಟುಗಳನ್ನಿಟ್ಟು, ಬರುವಾಗ ಒಂದು ವೈನ್ ಬಾಟಲ್ ಹಿಡಕೊಂಬಾ ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಈಚೆಗೆ ಹೆಂಡತಿಗೆ ಅಡುಗೆ ಕೆಲಸ ತ್ರಾಸವಾಗ್ತಿದೆ ಅನಿಸಿ 'ಯಾರಾದರೂ ಅಡುಗೆಯವರನ್ನ ವಿಚಾರಿಸು, ಬೆಳಗ್ಗೆ ಬಂದು ಮಾಡಿಟ್ಟು ಹೋದರೆ ಬಿಸಿ ಮಾಡ್ಕೊಳ್ಳದು ಅಷ್ಟೇನು ಕಷ್ಟವಾಗಲ್ಲ' ಎಂದು ಹೆಂಡತಿಗೆ ಹೇಳುತ್ತಲೇ ಇದ್ದರು. ಸ್ನೇಹಿತರನ್ನ ನೋಡಲು ವಾರಕ್ಕೆ ಒಂದೆರಡು ದಿನ ಅವರೇ ಕಾರು ಬಿಟ್ಟುಕೊಂಡು ಕ್ಲಬ್ಬಿಗೆ ಹೋಗಿಬರುತ್ತಿದ್ದರು. ಹತ್ತಿರದ ಪಾರ್ಕಿನಲ್ಲಿ ಒಂದು ನಿವೃತ್ತರ ಗುಂಪು ಪ್ರತಿದಿನ ಮುಂಜಾನೆ ಗುಂಪಿನಲ್ಲಿ ಕೈಕಾಲು ಆಡಿಸುವುದು, ಚಪ್ಪಾಳೆ ತಟ್ಟುವುದು ಮಾಡಿ ಲೋಕಾಭಿರಾಮ ನಡೆಸುತ್ತಿದ್ದರು. ಆ ಗುಂಪಿಗೆ ಕೃಷ್ಣೇಗೌಡರು ಸೇರಿದ್ದರೂ ಪ್ರತಿದಿನ ಹೋಗುತ್ತಿರಲಿಲ್ಲ. ಯಾವಾಗಲೋ ಮೂಡಿದ್ದಾಗ ಹೋಗುತ್ತಿದ್ದರು. ಪಾರ್ಕಲ್ಲೇ ಸ್ವಲ್ಪ ಅಡ್ಡಾಡಿ ಮನೆ ಸೇರುತ್ತಿದ್ದರು. ಅವರದ್ದೊಂದು ವಾಟ್ಸಪ್ ಗ್ರೂಪ್ ಸಹ ಇತ್ತು. ಅದರಲ್ಲಿ ಮತ್ತು ತಮ್ಮ ಇನ್ನಿತರ ಪರಿಚಿತರ ಜತೆ ಚಾಟ್ ಮಾಡುವುದು ಅವರಿಗೆ ಇಷ್ಟದ ಟೈಂಪಾಸ್. ಒಂದೇ ಮಾತಲ್ಲಿ ಹೇಳಬೇಕಂದರೆ ಕೃಷ್ಣೇಗೌಡರು ಮತ್ತು ಸುನಂದಮ್ಮನವರದ್ದು ಒಂದು ಶಾಂತಿ, ಸಮಾಧಾನ, ನೆಮ್ಮದಿ, ಅನ್ಯೋನ್ಯತೆಯಿಂದ ಕೂಡಿದ್ದ ಸಂಸಾರ. ಒಬ್ಬನೇ ಮಗನಿದ್ದ ಆ ಪುಟ್ಟ ಕುಟುಂಬ ಯಾವ ಗಳಿಗೆಯಲ್ಲಾದರೂ ಸೊಸೆಯನ್ನು ಮನೆ ತುಂಬಿಸಿಕೊಳ್ಳುವ ಸಲುವಾಗಿ ಮಗನ ಗ್ರೀನ್ ಸಿಗ್ನಲ್ಲಿನ ನಿರೀಕ್ಷೆಯಲ್ಲಿತ್ತು.

ಒಂದು ಭಾನುವಾರ ಮಧ್ಯಾಹ್ನ ಅಪ್ಪ-ಮಗ ಊಟಕ್ಕೆ ಮುನ್ನ ಕಾಜೆ ಫ್ರೈ ಜೊತೆ ವೈನ್ ಪಾರ್ಟಿ ಮಾಡುತ್ತಿದ್ದರು. ಅಪ್ಪ ಒಳ್ಳೆ ಮೂಡಲ್ಲಿದ್ದಾಗ ಮುಕುಂದ, 'ನಾನು ಎರಡು ವರ್ಷದಿಂದ ಕೇಳ್ತಾ ಇದ್ರೂ ನೀವು ಸುಮ್ಮನೇನೆ ಇದೀರಾಪ್ಪ' ಎಂದು ಸ್ವಲ್ಪ ಪ್ರೀತಿ ತುಂಬಿದ ಒತ್ತಾಯದಲ್ಲಿ ಪ್ರಾಪರ್ಟಿ ವಿಷಯ ತೆಗೆದ.

'ಪ್ರಾಪರ್ಟಿಗೀಪರ್ಟಿ ಎಲ್ಲ ಪ್ರಾಬ್ಲಮ್ಮು ಕಣೋ ಮುಕುಂದ. ಈಗ ಬೆಂಗಳೂರಲ್ಲಿ ಯಾವುದಾದರೂ ಪ್ರಾಪರ್ಟಿ ಮುಟ್ಟಕ್ಕಾಗುತ್ತಾ... ಮೂವತ್ತು ನಲವತ್ತು ಕಿಲೋಮೀಟರ್ ದೂರ ಹೋದರೂ ಕಷ್ಟವೇ. ಯಾವನದ್ದೋ ಪ್ರಾಪರ್ಟಿ ಇನ್ಯಾವನೋ ಮಾರಿರತಾನೆ. ಒಂದು ಡಾಕ್ಯುಮೆಂಟೂ ಸರಿಯಾಗಿರಲ್ಲ. ರಾತ್ರೋರಾತ್ರಿ ಎನ್ಕ್ರೋಚ್ ಮಾಡಿರ್ತಾರೆ.'

'ನಾವೇನು ದಿನಾ ಕಾಯ್ತಾ ಕೂತಿರೋಕಾಗುತ್ತಾ? ಅಲ್ಲದೆ ನೀನೇನು ಈಗ ಅರ್ಜೆಂಟಾಗಿ ಮನೆ ಕಟ್ಟಬೇಕಾ...? ಸುಮ್ಮನೆ ಒಳ್ಳೆ ಬಡ್ಡಿ ಸಿಗೋ ಬ್ಯಾಂಕಲ್ಲಿ ಇಟ್ಟರೋದೇ ಒಳ್ಳೇದು' ಎಂದು ಸಮಾಧಾನದಲ್ಲೇ ವಿವರಿಸಿದ್ದರು ಕೃಷ್ಣೇಗೌಡರು. ಸುನಂದಮ್ಮ, 'ನಿಮಗೆ ಚೆನ್ನಾಗಿ ಗೊತ್ತಿರುತ್ತೇಂತ ಕೇಳ್ತಾನೆ, ಸ್ವಲ್ಪ ಗೈಡ್ ಮಾಡಿ' ಎಂದು ಮಗನ ಪರ ವಹಿಸಿ ಮಾತಾಡಿದ್ದರು. ಕೊನೆಗೆ ಆ ಮಧ್ಯಾಹ್ನ ಅಪ್ಪನ ಜತೆ ಒಳ್ಳೇ ವೈನ್ ಪಾರ್ಟಿ ಆದದ್ದಷ್ಟೇ ಮುಕುಂದನಿಗಾದ ಲಾಭ.

## 2

ವೈನ್ ಪಾರ್ಟಿ ಆದ ಒಂದೇ ವಾರದಲ್ಲಿ ಒಂದು ಬೆಳಿಗ್ಗೆ ಬೆಳಿಗ್ಗೇನೆ ಅಮ್ಮ ಮಗನಿಗೆ ಆಶ್ಚರ್ಯವಾಗುವಂತೆ ಕೃಷ್ಣೇಗೌಡರು, 'ಮುಕುಂದ ಬಾ ಇಲ್ಲಿ, ನಿನ್ನತ್ರ ಸ್ವಲ್ಪ ಮಾತಾಡಬೇಕು' ಎಂದು ಮಗನನ್ನು ಕರೆದರು. ಮುಕುಂದ ಹೊರಗೆ ಎಲ್ಲೋ ಹೊರಡುವ ಅವಸರದಲ್ಲಿದ್ದ. 'ಆಮೇಲೆ ಹೋದರಾಯಿತು ಬಾ ಇಲ್ಲಿ' ಅಂದರು. ಅವರು ಹೀಗೆ ಎಂದೂ ಒತ್ತಾಯದಲ್ಲಿ ಕರೆದಿದ್ದಿಲ್ಲ. ಅವನು ಯಾರಿಗೋ ಫೋನ್ ಮಾಡಿ 'ಡ್ಯಾಡಿ ಏನೋ ಕೆಲಸ ಹೇಳಿದಾರೆ, ಈವ್ನಿಂಗ್ ಸಿಕ್ತೀನಿ, ಸಾರಿ ಬ್ರೋ...' ಅಂದು ಈಸಿ ಚೇರಿನಲ್ಲಿ ಕುಳಿತಿದ್ದ ಅಪ್ಪನ ಮುಂದೆ ಸೋಫಾದಲ್ಲಿ ಕುಳಿತ. ಕೃಷ್ಣೇಗೌಡರು ನೇರವಾಗಿ ವಿಷಯ ಪ್ರಸ್ತಾಪಿಸಿ 'ಪ್ರಾಪರ್ಟಿಗೇಂತ ಎಷ್ಟು ಇಟ್ಟಿದ್ದೀಯಾ?' ಎಂದರು. 'ಈಗ ರೆಡಿಯಾಗಿ ಎಂಬತ್ತು ಲಕ್ಷ ಎಫ್‌ಡಿಗಳಲ್ಲಿದೆ, ಇನ್ನೊಂದು ಹತ್ತು ಹದಿನೈದು ಅಡ್ಜಸ್ಟ್ ಮಾಡಬೌದು' ಎಂದು ಅಮ್ಮನ ಮುಖವನ್ನೇ ನೋಡುತ್ತಾ ಹೇಳಿದ. ಇಬ್ಬರ ಮುಖದಲ್ಲೂ ಒಂದು ಸಮಾಧಾನ ಮತ್ತು ಇದ್ದಕ್ಕಿದ್ದ ಹಾಗೆ ಇವರಿಗೇನಾಯಿತು ಎಂಬ ಆಶ್ಚರ್ಯಭಾವ ಮೂಡಿತು. 'ಸರಿ ಹಂಗಾದ್ರೆ, ನೀನು ಹೋಗಿ ನಿನ್ನ ಕೆಲಸ ಮುಗಿಸಿ ಊಟದ ಹೊತ್ತಿಗೆ ಬಾ. ನಾನೊಂದು ಪ್ರಾಪರ್ಟಿ ನೋಡಿದ್ದೀನಿ, ಎಲ್ಲರೂ ಹೋಗಿಬರಣ' ಅಂದರು. ಆಗಲೂ ಅಮ್ಮ ಮಗ ಪರಸ್ಪರ ಮುಖ ನೋಡಿಕೊಂಡರು. ಇಬ್ಬರ ಮನಸ್ಸಿನಲ್ಲೂ